**ದಿನಾಂಕ :18–09–2021 ರಂದು ಸೋಮವಾರ ಬೆಳಗ್ಗೆ 11:00 ಗಂಟೆಗೆ ಅನ್ನಸಂದ್ರ ಪಾಳ್ಯದ, ಬಿ.ಬಿ.ಎಂ.ಪಿ ಯೋಗ ಸೆಂಟರ್‌ನಲ್ಲಿ ವಾರ್ಡ್ ಸಂಖ್ಯೆ:87ರ, ಶ್ರೀ.ವಿಜಯ ಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ.ಜಿ.ಡಿ.ಸೋಮಯ್ಯ (ಸಹಾಯಕ ಅಭಿಯಂತರರು) |
| 2. | ಶ್ರೀ. ರಂಗನಾಥ, ಕಿರಿಯ ಆರೋಗ್ಯ ಪರಿವೀಕ್ಷಕರು |
| 3. | ಶ್ರೀ.ಕೆ.ಆರ್.ಸಿ. ವಾರಿಯರ್ಸ್ |
| 4 | ಶ್ರೀ. ಎಂ.ಎಸ್. ಮಂಜುನಾಥ್ |
| 5 | ಶ್ರೀ. ಶಾಂತ ಕುಮಾರ್ |
| 6 | ಶ್ರೀ. ಬಿ.ಸಿ.ಮುರುಗ |
| 7 | ಶ್ರೀ. ಶ್ರೀನಿವಾಸ್ ಮೂರ್ತಿ |
| 8 | ನಿವಾಸಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಆಸೋಸಿಯೇಷನ್‌ನ ಅಧ್ಯಕ್ಷರುಗಳು, ಪ್ರತಿನಿಧಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

1) **ಕೋವಿಡ್–19 ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ, ಸಂಬಾವ್ಯ ಮೂರನೇ ಅಲೆಯನ್ನು ನಿಯಂತ್ರಿಸುವ ಬಗ್ಗೆ ಮತ್ತು ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ.**

ಈ ಕುರಿತು ಚರ್ಚಿಸಲಾಗಿ, ವಾರ್ಡ್‌ಗೆ ಸಂಬಂಧಿಸಿದ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯ ಅಧಿಕಾರಿಗಳು ವಾರ್ಡ್‌ನಲ್ಲಿ ಕೋವಿಡ್–19 ಸಂಬಾವ್ಯ ಮೂರನೇ ಅಲೆಗೆ ಸಂಬಂಧಪಟ್ಟ ಸೋಂಕು ಹರಡುವುದನ್ನು ತಡೆಗಟ್ಟುವ ಎಲ್ಲಾ ಮುಂಜಾಗೃತ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿರುತ್ತಾರೆ. ಆರೋಗ್ಯ ಅಧಿಕಾರಿಗಳು ಕೋವಿಡ್ ಲಸಿಕೆಯನ್ನು ವಾರ್ಡ್‌ನ ಜನಸಾಮಾನ್ಯರಿಗೆ ನೀಡುತ್ತಿರುತ್ತಾರೆ. ಮುಂಬರುವ ದಿನಗಳಲ್ಲಿ ಲಸಿಕೆ ಪ್ರಮಾಣವನ್ನು ಹೆಚ್ಚಿಸಲಾಗುವುದೆಂದು ಆರೋಗ್ಯ ಅಧಿಕಾರಿಗಳಿಗೆ ಸೂಚಿಸಲಾಗಿದೆ .

ವಾರ್ಡ್ ವ್ಯಾಪ್ತಿಯ ರಮೇಶ್‌ನಗರ, 10ನೇ ಮತ್ತು 8ನೇ ಅಡ್ಡರಸ್ತೆ, ಜಗಧೀಶ್‌ನಗರ 1ನೇ ಮುಖ್ಯರಸ್ತೆ ಅನ್ನಸಂದ್ರಪಾಳ್ಯ 6ನೇ ಅಡ್ಡರಸ್ತೆ ಹಾಗೂ ರೆಡ್ಡಿಪಾಳ್ಯದಲ್ಲಿ ಮುಖ್ಯರಸ್ತೆ ಕುಡಿಯುವ ನೀರಿನ ಸಮಸ್ಯೆ ಹಾಗೂ ಒಳಚರಂಡಿಯ ಸಮಸ್ಯೆ ಇದ್ದು ಸಮಸ್ಯೆಗಳನ್ನು ಬಗೆಹರಿಸುವಂತೆ ಸಾರ್ವಜನಿಕರು ಕೋರಿರುತ್ತಾರೆ, ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ ಬಿ.ಡಬ್ಲ್ಯು.ಎಸ್.ಎಸ್.ಬಿ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

3) **ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ದಿ ಕಾರ್ಯಗಳ ಬಗ್ಗೆ:-**

ವಾರ್ಡ್‌ನ ಅಭಿವೃದ್ದಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದ್ದು ಯಲ್ಲಮ್ಮ ದೇವಸ್ಥಾನ ರಸ್ತೆ ಜಗಧೀಶ್ ನಗರ 1ನೇ ಮುಖ್ಯರಸ್ತೆ , ಇಸ್ಲಾಂಪುರ ಹಾಗೂ ವಿನಾಯಕ ನಗರದಲ್ಲಿ 11ನೇ ಅಡ್ಡರಸ್ತೆ ಚರಂಡಿಯ ಹೂಳೆತ್ತಲು ಹಾಗೂ ಜಲ್ಲಿ ಮತ್ತು ಡಂಬರ್ ಹಾಕಲು ಸಾರ್ವಜನಿಕರು ಕೋರಿರುತ್ತಾರೆ, ಸದರಿ ಕಾಮಗಾರಿಯನ್ನು ಕೈಗೊಳ್ಳುವಂತೆ ಸಭೆಯಲ್ಲಿ ಸಂಬಂಧಪಟ್ಟ ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

4) **ವಿದ್ಯುತ್ ಸರಬರಾಹು (ಬೆಸ್ಕಾಂ)ಗೆ ಸಂಬಂದಿಸಿದ ವಿಷಯದ ಬಗ್ಗೆ:-**

ವಾರ್ಡ್ ವ್ಯಾಪ್ತಿಯ 3ನೇ ಹಾಗೂ 4ನೇ ಮುಖ್ಯರಸ್ತೆ ಜಗಧೀಶ್ ನಗರದಲ್ಲಿ .ವಿದ್ಯುತ್ ಕಂಬ ಹಾಳಾಗಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು,ವಿದ್ಯುತ್ ಕಂಬವನ್ನು ತೆಗೆದು ಹೊಸ ಕಂಬವನ್ನು ಅಳವಡಿಸಲು ಸಾರ್ವಜನಿಕರು ಕೋರಿರುತ್ತಾರೆ, ಇದರ ಬಗ್ಗೆ ಕ್ರಮತೆಗೆದುಕೊಳ್ಳಲು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಯಿತು.

5) **ಚರಂಡಿ ಹೂಳು ಎತ್ತುವ ವಿಷಯದ ಬಗ್ಗೆ:-**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಅನ್ನಸಂದ್ರ ಪಾಳ್ಯ, ಜಗದೀಶ್‌ನಗರ ,ವಿನಾಯಕನಗರ ಹಾಗೂ ಇಸ್ಲಾಂಮ್‌ಪುರದಲ್ಲಿ ಬರುವ ಚರಂಡಿಗಳ ಹೂಳು ಎತ್ತುವುದು ಹಾಗೂ ಹಾಲಾಗಿರುವ ಚರಂಡಿಗಳ ಹೊಸದಾಗಿ ನಿರ್ಮಿಸುವ ಬಗ್ಗೆ ಸಾರ್ವಜನಿಕರು ಕೋರಿರುತ್ತಾರೆ. ಇದರ ಬಗ್ಗೆ ಕ್ರಮತೆಗೆದುಕೊಳ್ಳಲು ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.87 ಹೆಚ್.ಎ.ಎಲ್ ಏರ್‌ಪೋರ್ಟ್

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ನೋಡೆಲ್ ಅಧಿಕಾರಿಗಳು

**ಪ್ರತಿಯನ್ನು:**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಕಛೇರಿ ಪ್ರತಿ.